ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 682/2021

ಸಿ ಡಬ್ಲ್ಯೂ-3

ಪಿ ಡಬ್ಲ್ಯೂ-3

ದಿಃ 25-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಅಶೋಕ ನಾಯಕ |
| ತಂದೆಯ ಹೆಸರುಃ | ಬೊಮ್ಮಯ್ಯ ನಾಯಕ |
| ವಯಸ್ಸುಃ | 62 ವರ್ಷ |
| ಉದ್ಯೋಗಃ | ರೈತಾಬಿ |
| ವಿಳಾಸಃ | ಹೊಸಕೇರಿ, ಅಂಕೋಲಾ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ಚಾಸಾ-2 ರವರು ನಾನು ಪಂಚನಾಮೆಗೆ ಹೋದಾಗ ಬಂದಿದ್ದರು. ಚಾಸಾ-1 ರವರು ಮನೆಯ ಕಳ್ಳತನದ ವಿಚಾರವಾಗಿ ಅವರ ಮನೆಯ ಒಳಗಡೆ ಪಂಚನಾಮೆ ಮಾಡಿರುತ್ತಾರೆ. ಚಾಸಾ-1 ರವರು ತೋರಿಸಿದ ಸ್ಥಳದ ಮೇರೆಗೆ ಪಂಚನಾಮೆ ಮಾಡಿರುತ್ತಾರೆ. ನಿಪಿ-2 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯು ಸಹಿಯನ್ನು ನಿಪಿ-2ಸಿ ಎಂದು ಗುರುತಿಸಲಾಯಿತು. ರಾತ್ರಿ 10.30 ರಿಂದ 11.45 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ. ನಂತರ ಮನೆಯ ಕಪಾಟು ಎಲ್ಲವನ್ನು ಪರಿಶೀಲನೆ ಮಾಡಿ ಪೊಟೋವನ್ನು ಪಡೆದಿರುತ್ತಾರೆ. ಸಾಕ್ಷಿಯು ನಿಪಿ-3 ರಿಂದ 5 ಪೊಟೋಗಳನ್ನು ನೋಡಿ ಗುರುತಿಸುತ್ತಾರೆ.

ಪಾಟಿ ಸವಾಲುಃ 1ನೇ ಆರೋಪಿ ಪರ ವಕೀಲರಾದ ಶ್ರೀ ವಿ.ಎಸ್.ಎನ್ ಇವರಿಂದಃ

2. ಚಾಸಾ-1 ನಿಮ್ಮ ಸಂಬಂಧಿಕರು ಎಂದರೆ ಸಾಕ್ಷಿಯು ನಮ್ಮ ಊರಿನವರು ಎಂದು ನುಡಿಯುತ್ತಾರೆ. ನಿಮ್ಮ ಸಮಾಜದವರು ಎಂದರೆ ಸರಿ. ಸಾಮಾನ್ಯವಾಗಿ ನೀವು ಅವರ ಮನೆಗೆ ಹೋಗಿ ಬಂದು ಮಾಡುತ್ತೀರಿ ಎಂದರೆ ಸರಿಯಲ್ಲ. ಕೆಲಸಕ್ಕೆ ಕರೆದಾಗ ಮಾತ್ರ ಹೋಗುತ್ತೇನೆ. ನಾನು ಚಾಸಾ-1 ರವರ ಮನೆಯ ಹತ್ತಿರ ಹೋಗುತ್ತಿರುವಾಗ ನನ್ನನ್ನು ಕರೆದಿರುತ್ತಾರೆ. ಯಾವ ದಿನಾಂಕದಂದು ಕರೆದಿರುತ್ತಾರೆ ಎಂದರೆ ಸಾಕ್ಷಿಯು ದಿಃ08-03-2021 ರಂದು ಎಂದು ನುಡಿಯುತ್ತಾರೆ. ನಿಮಗೆ ಪೊಲೀಸರು ಪಂಚನಾಮೆಗೆ ಬರಲು ನೋಟೀಸು ಕೊಟ್ಟಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮನೆಯ ನಂಬರು ಹಾಗೂ ಸರ್ವೆ ನಂಬರು ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಎಷ್ಟು ಗಂಟೆಗೆ ಕರೆದಿರುತ್ತಾರೆ ಎಂದರೆ ಸಾಕ್ಷಿಯು ರಾತ್ರಿ ಸುಮಾರು 9 ಗಂಟೆಗೆ ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರು ನೀವು ಹೋಗುವ ಪೂರ್ವದಲ್ಲಿಯೇ ಇದ್ದಾರಾ ಅಥವಾ ನಂತರ ಬಂದಿರುತ್ತಾರಾ ಎಂದರೆ ಸಾಕ್ಷಿಯು ನಾನು ಹೋದ ನಂತರ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಯಾವ ವಾಹನದಲ್ಲಿ ಬಂದಿದ್ದರು ಎಂದರೆ ಜೀಪಿನಲ್ಲಿ ಎಂದು ನುಡಿಯುತ್ತಾರೆ. ವಾಹನ ಸಂಖ್ಯೆ ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಾವ ವಸ್ತು ಕಳ್ಳತನವಾಗಿರುತ್ತದೆ ಎಂದು ನಿಮಗೆ ವೈಯಕ್ತಿಕ ಮಾಹಿತಿ ಇರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರ ಮಾತನ್ನು ಕೇಳಿ ಕಳ್ಳತನವಾಗಿರುತ್ತದೆ ಎಂದು ಹೇಳುತ್ತಿದ್ದೀರಿ ಎಂದರೆ ಸರಿ. ಪೊಲೀಸರು ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಎಷ್ಟು ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ 1-2 ಸಹಿಗಳನ್ನು

ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸ್ಪಷ್ಟವಾಗಿ ಹೇಳಲು ಬರುತ್ತಾ ಎಂದರೆ ಸಾಕ್ಷಿಯು 3–4 ವರ್ಷವಾಗಿದ್ದರಿಂದ ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ನಿಪಿ–2 ಪಂಚನಾಮೆಯ ಮೊದಲನೇ ಪುಟದಲ್ಲಿ ನಿಮ್ಮ ಸಹಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ಎಲ್ಲಿ ಬರೆದಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ–1 ರವರು ಮನೆಯ ಕೆಳಗೆ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟರಿಂದ ಎಷ್ಟು ಗಂಟೆಯವರೆಗೆ ಬರೆದಿರುತ್ತಾರೆ ಎಂದರೆ ಸಾಕ್ಷಿಯು ರಾತ್ರಿ 10.30 ರಿಂದ 11.40 ಗಂಟೆಯವರೆಗೆ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರು ಎಷ್ಟು ಗಂಟೆಗೆ ಬಂದಿರುತ್ತಾರೆ ಎಂದರೆ ಸಾಕ್ಷಿಯು 9 ಗಂಟೆಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಹೀಗೇ ಬರೆಯಬೇಕು ಎಂದು ನೀವೇನಾದರೂ ಪೊಲೀಸರಿಗೆ ಹೇಳಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪೊಲೀಸರು ಸಹಿ ಹಾಕಲು ಹೇಳಿರುತ್ತಾರೆ. ಎಲ್ಲ ಬರೆದ ನಂತರ ಸಹಿ ಮಾಡಿರುತ್ತೇನೆ. ನೀವು ಹೇಳಿದ ಹಾಗೆ ಪೊಲೀಸರು ಚಾಸಾ–1 ರವರ ಮನೆಗೆ ಬಂದಿದ್ದಾಗಲಿ, ಯಾವುದೇ ಪಂಚನಾಮೆ ಮಾಡಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ಕರೆದುಕೊಂಡು ಬಂದಿರುವುದಿಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ–1 ರವರ ಮನೆಯಲ್ಲಿ ಎಷ್ಟು ಕಪಾಟುಗಳು ಇರುತ್ತವೆ ಎಂದರೆ ಸಾಕ್ಷಿಯು ಕೆಳಗೆ 2 ಹಾಗೂ ಮೇಲೆ 2 ಇರುತ್ತವೆ ಎಂದು ನುಡಿಯುತ್ತಾರೆ.

ಉಳಿದ ಆರೋಪಿತರ ಪರ ವಕೀಲರು 1ನೇ ಆರೋಪಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿಕೊಂಡಿದ್ದು, ಅದರಂತೆ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.